


ಮೈಸೂರು ರಾಮಕೃಷ್ಣ ವಿದ್ಯಾಶಾಲೆಯಲ್ಲಿ

ಅವಳು ಭಾರತದ ತ್ರಿವರ್ಣಧ್ವಜ, ದಿವ್ಯತ್ರಯರ ಚಿತ್ರ ಹಾಗೂ ಆರೋಹಣಕ್ಕೆ ಆರ್ಥಿಕ ವ್ಯವಸ್ಥೆ ಮಾಡಿಕೊಟ್ಟ ಟಾಟಾ ಸ್ಟೀಲ್ ಕಂಪೆನಿಯ ಧ್ವಜ ಇವನ್ನು ನೆಟ್ಟಳು. ತಾನು ಎವರೆಸ್ಟ್ ಏರಿದ್ದರ ದಾಖಲೆಗಾಗಿ ತನ್ನ ಫೋಟೋ ತೆಗೆಯಲು ಅವಳು ಶೆರ್ಪಾನ ಕೈಗೆ ಕ್ಯಾಮರಾ ಕೊಟ್ಟಳು. ''ಈಗಲೇ ವಾಪಸ್ ಹೋಗೋಣ, ಇಲ್ಲದಿದ್ದರೆ ಸತ್ತುಬಿಡುತ್ತೀಯೆ'' ಎಂದ ಶೆರ್ಪಾ. ಆದರೂ ಅವಳ ಒತ್ತಾಯಕ್ಕೆ ಮಣಿದು ಅವನು ಫೋಟೋ ತೆಗೆದ. ''ಈಗ ಸ್ವಲ್ಪ ಹೊತ್ತು ನನ್ನ ವೀಡಿಯೋ ತೆಗೆ'' ಎಂದಳು ಅರುಣಿಮಾ. ಆಗ ಕೆರಳಿ ಕೆಂಡವಾದ ಶೆರ್ಪಾ, 'ಫೋಟೋ ತೆಗೆದದ್ದಾಯಿತು, ಈಗ ವೀಡಿಯೋ! ಇದೇನು, ಸಾವಿನ ಜೊತೆಗೆ ಚೆಲ್ಲಾಟವೆ!' ಎಂದುಕೊಂಡಿರಬೇಕು – ಆದರೆ ಅರುಣಿಮಾ ಬಿಡಲಿಲ್ಲ. ಕೊನೆಗೂ ಅವನು ಎರಡು ನಿಮಿಷ ವೀಡಿಯೋ ತೆಗೆದ. ಭಾರತದ ಯುವಜನತೆಗೆ ತನ್ನ ಸಾಧನೆಯನ್ನು ತೋರಿಸಿ, ಅವರಿಗೆಲ್ಲ ತನ್ನ ಸ್ಫೂರ್ತಿಯ ಸಂದೇಶವನ್ನು ಸಾರಲು ಅವಳಿಗದು ಅಗತ್ಯವಾಗಿತ್ತು.

ಅನಂತರ ಎವರೆಸ್ಟ್ ಶಿಖರದ ತುದಿಯಲ್ಲಿ ಹಿಮದಲ್ಲೇ ಒಂದು ಪೀಠವನ್ನು ಮಾಡಿ, ಅದರ ಮೇಲೆ ತನ್ನಲ್ಲಿದ್ದ ದಿವ್ಯತ್ರಯರ ಚಿತ್ರವನ್ನು ಸ್ಥಾಪಿಸಿದಳು ಅರುಣಿಮಾ. ಅವಳು ದಿವ್ಯತ್ರಯರನ್ನು ಪ್ರಾರ್ಥಿಸಿದಳು: ''ನನಗೆ ರಾಮಕೃಷ್ಣ ಮಿಷನ್ನಿನ ಸಾಧುಗಳ ಹಾಗೆ ಮಂತ್ರ ಹೇಳಿ ಪ್ರಾರ್ಥಿಸಲು ಬರುವುದಿಲ್ಲ. ಆದರೆ ನನ್ನ ಎದೆಯಾಳದ ಈ ಪ್ರಾರ್ಥನೆಯನ್ನು ದಯವಿಟ್ಟು ಸ್ವೀಕರಿಸಿ. ಜಗತ್ತಿನಲ್ಲಿರುವ ಎಲ್ಲರ ಕಷ್ಟವನ್ನೂ ನಿವಾರಿಸಿ; ವಿಶೇಷವಾಗಿ ನನಗಿಂತಲೂ ದುರದೃಷ್ಟಶಾಲಿಗಳನ್ನು.''

ಆಗಲೇ ತಡವಾಗುತ್ತಿತ್ತು. ಎವರೆಸ್ಟ್ ಶಿಖರದ ತುದಿಯಲ್ಲಿ ಪೂರ್ವಾಹ್ನ ೧೧ ಗಂಟೆಯ ನಂತರ ಇರುವುದೆಂದರೆ ಸಾವು ಕಟ್ಟಿಟ್ಟಬುತ್ತಿ. ಈಗಾಗಲೇ ಗಂಟೆ ಹನ್ನೊಂದಾಗಿತ್ತು. ಆಗಲೇ ಗಂಟೆಗೆ ೨೩೦ ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿತ್ತು. ಹವಾಮಾನ ಸೊನ್ನೆಗಿಂತ ೪೦ ಡಿಗ್ರಿ ಕೆಳಗಿತ್ತು. ಅರುಣಿಮಾಳ ಬಳಿ ಇದ್ದ ಆಮ್ಲಜನಕದ ಸಿಲಿಂಡರ್‌ನಲ್ಲಿ ಸ್ವಲ್ಪ ಮಾತ್ರ ಉಳಿದಿತ್ತು. ಇನ್ನೂ ಅರುಣಿಮಾಳ ಪ್ರಾರ್ಥನೆ ಮುಗಿದಿಲ್ಲವಲ್ಲ ಎಂದು ಶೆರ್ಪಾ ಚಡಪಡಿಸುತ್ತಿದ್ದ. ಪ್ರಾರ್ಥನೆ ಮುಗಿಸಿದ ಅರುಣಿಮಾ ಹಿಂದಿರುಗಿ ಪರ್ವತ ಇಳಿಯತೊಡಗಿದಳು. ಅಷ್ಟರಲ್ಲಿ ಒಂದು ಅದ್ಭುತವೇ ನಡೆದು ಅರುಣಿಮಾಗೆ ಇನ್ನೊಂದು ಆಕ್ಸಿಜನ್ ಸಿಲಿಂಡರ್ ದೊರಕಿತು.

ಒಬ್ಬ ಬ್ರಿಟಿಷ್ ಆರೋಹಿ ಎರಡು ಸಿಲಿಂಡರ್‌ಗಳೊಂದಿಗೆ ಪರ್ವತಾರೋಹಣ ಮಾಡುತ್ತಿದ್ದ. ನಡುವೆ ಹವಾಮಾನ ಕೆಟ್ಟು ಹೋಗಿ, ಅವನು ಎವರೆಸ್ಟ್ ಶಿಖರವೇರದೆ ಹಿಂದಿರುಗುತ್ತಿದ್ದ. ಸುರಕ್ಷತೆಗಾಗಿ ಅವನು ಅರ್ಧ ಖಾಲಿಯಾಗಿದ್ದ ಸಿಲಿಂಡರನ್ನು ಕಳಚಿ ಅಲ್ಲೇ ಬಿಸಾಡಿ, ಇನ್ನೊಂದನ್ನು ಧರಿಸಿಕೊಂಡಿದ್ದ. ಅದನ್ನು ಗಮನಿಸಿದ ಶೆರ್ಪಾ, ಓಡಿಹೋಗಿ ಎಸೆದಿದ್ದ ಸಿಲಿಂಡರನ್ನು ತಂದು ಅರುಣಿಮಾಗೆ ನೀಡಿದ. ಹೀಗೆ ಅರುಣಿಮಾ ಸಾವಿನ ಅಂಚಿನಿಂದ ಪಾರಾದಳು.

ಹಿಂದಿರುಗಿ ಬರುವಾಗ ಅರುಣಿಮಾ ಇನ್ನಷ್ಟು ತೊಂದರೆಗಳನ್ನು ಅನುಭವಿಸಬೇಕಾಯಿತು. ಒಂದೆಡೆ ಅವಳ ಕೈಗಳು ಮರಗಟ್ಟಿ ಹೋಗಿ, ಪರ್ವತಾರೋಹಣದ ಹಗ್ಗವನ್ನು ಹಿಡಿಯಲು ಸಾಧ್ಯವಾಗದೆ ಹೋಯಿತು. ಅವಳು ನೋವು ತಡೆಯಲಾಗದೆ ಒಂದೇ ಸಮನೆ ಅಳತೊಡಗಿದಳು. ಕಣ್ಣೀರಿಡುತ್ತ ಅವಳು ತನ್ನಲ್ಲೇ ಹೇಳಿಕೊಂಡಳು: ''ಅರುಣಿಮಾ, ಅತ್ತು ಪ್ರಯೋಜನವಿಲ್ಲ. ಬದುಕಿ ಉಳಿಯಬೇಕಿದ್ದರೆ ನೀನು ಸಹಿಸಿಕೊಳ್ಳಬೇಕು. ನಿಲ್ಲದೆ ಮುಂದಕ್ಕೆ ಸಾಗಬೇಕು!'' ಅವಳು ದೇವರಲ್ಲಿ ಮೊರೆಯಿಟ್ಟಳು– ''ಓ ದೇವರೆ, ನೀನು ಸರ್ವಶಕ್ತ ಎಂದು ನಾನು ತಿಳಿದಿದ್ದೇನೆ. ನಾನು ಇಲ್ಲೇ ಸಾಯಬೇಕು ಅಂತ ನೀನು ತೀರ್ಮಾನಿಸಿದ್ದೀಯಾ? ನಾನು ನಿನ್ನ ಮಗಳು. ನಿನ್ನ ಮಗಳಾಗಿರುವಾಗ ನಾನು ನನ್ನಿಂದಾದಷ್ಟೂ ಬದುಕಿ ಉಳಿಯಲು ಹೋರಾಡುತ್ತೇನೆ. ಯಾರು ಗೆಲ್ಲುತ್ತಾರೋ ನೋಡೋಣ!''

ಕೊನೆಗೂ ಅರುಣಿಮಾ ಬದುಕಿ ಉಳಿದಳು; ಬಹುಕಷ್ಟದಿಂದ ಹಿಂದಿರುಗಿ ಬಂದಳು. ಭಾರತದ ಹಲವೆಡೆ ಸಂಚರಿಸುತ್ತ, ವಿವಿಧ ಸಂಘಸಂಸ್ಥೆಗಳಲ್ಲಿ ತನ್ನ ಅಸಾಧಾರಣ ಅನುಭವಗಳನ್ನು ಸ್ಫೂರ್ತಿಭರಿತ ಮಾತುಗಳ ಮೂಲಕ ಹೇಳುತ್ತ ಸಹಸ್ರಾರು ಮಂದಿ ಯುವಕ–ಯುವತಿಯರನ್ನು ಪ್ರೇರೇಪಿಸುವುದರಲ್ಲಿ ಅರುಣಿಮಾ ನಿರತಳಾಗಿದ್ದಾಳೆ. ಅಂಗವಿಕಲರಿಗಾಗಿ ಒಂದು ಸ್ಪೋರ್ಟ್ಸ್ ಅಕಾಡೆಮಿಯನ್ನು ಸ್ಥಾಪಿಸುವ ಯೋಜನೆಯನ್ನೂ ಅವಳು ಹಾಕಿಕೊಂಡಿದ್ದು, ಅದಕ್ಕಾಗಿ ನಿಧಿಸಂಗ್ರಹ ಮಾಡುತ್ತಿದ್ದಾಳೆ. ಇದಲ್ಲದೆ, ಪ್ರಪಂಚದ ಏಳು ಖಂಡಗಳ ಅತ್ಯುನ್ನತ ಶಿಖರಗಳನ್ನೆಲ್ಲ ಏರುವ ಮಹತ್ವಾಕಾಂಕ್ಷೆಯನ್ನು ಅವಳು ಹೊಂದಿದ್ದಾಳೆ, ಈಗಾಗಲೇ ಎವರೆಸ್ಟ್ ಸೇರಿದಂತೆ (ಏಷ್ಯಾ, ಯೂರೋಪ್ ಹಾಗೂ ಆಫ್ರಿಕಾ ಖಂಡಗಳ) ಮೂರು ಶಿಖರಗಳನ್ನು ಯಶಸ್ವಿಯಾಗಿ ಏರಿದ್ದಾಳೆ. ಅವಳ ಮುಂದಿನ ಗುರಿ ಆಸ್ಟ್ರೇಲಿಯಾದ ಅತ್ಯುನ್ನತ ಶಿಖರ. ಕೆಲವೇ ವರ್ಷಗಳಲ್ಲಿ ಅವಳು ತನ್ನ ಗುರಿಯನ್ನು ಸಾಧಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

''ಪ್ರಪಂಚದ ಇತಿಹಾಸವೆಂದರೆ, ಅದು ತನ್ನಲ್ಲಿ ಆತ್ಮವಿಶ್ವಾಸ ಹೊಂದಿದ ಕೆಲವೇ ವ್ಯಕ್ತಿಗಳ ಇತಿಹಾಸ. ಆತ್ಮವಿಶ್ವಾಸ ಒಳಗಿರುವ ದಿವ್ಯತೆಯನ್ನು ಪ್ರಕಟಗೊಳಿಸುವುದು'' ಎಂಬ ಸ್ವಾಮಿ ವಿವೇಕಾನಂದರ ವಾಣಿ ಅರುಣಿಮಾ ಸಿನ್ಹಾಳ ಸಾಧನೆಯನ್ನು ಕಂಡಾಗ ಹೆಚ್ಚು ಸ್ಪಷ್ಟವಾಗುತ್ತದೆ.

*(ಆಧಾರ: **Global Vedanta,** Summer Issue, 2014 ಮತ್ತು ೨೬.೯.೨೦೧೪ ರಂದು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಅರುಣಿಮಾ ಸಿನ್ಹಾ ಮಾಡಿದ ಭಾಷಣದಿಂದ ಸಂಗ್ರಹಿಸಿದ ಭಾಗಗಳು. ಹೆಚ್ಚಿನ ವಿವರಗಳಿಗೆ : **arunimasinha.com** ನೋಡಿ)* *

# ಇದು ನನ್ನಿಂದಲೇ

ರಷ್ಯಾ ದೇಶದ ವೈರಿತ್ಸಾದ **ಸಂತ ಸೆರಾಫಿಂ** (೧೮೬೫–೧೯೪೯) ಒಬ್ಬ ರೈತರ ಹುಡುಗನಾಗಿದ್ದವನು. ಅನಂತರ ಅವನು ಗೃಹಸ್ಥ ಜೀವನದ ಹಲವು ಮುಖಗಳನ್ನು ನೋಡಿ, ಕೊನೆಗೆ ರಷ್ಯಾದ ಅತಿದೊಡ್ಡ ಕ್ರೈಸ್ತ ಸಂನ್ಯಾಸೀ ಮಠದಲ್ಲಿ ಆಧ್ಯಾತ್ಮಿಕ ಗುರುವಾದನು. ತನ್ನ ಬದುಕನ್ನೆಲ್ಲ ದೇವರಿಗಾಗಿ ಅರ್ಪಿಸಿ, ಜೀವನದುದ್ದಕ್ಕೂ ಇತರರಿಗೋಸ್ಕರ ಪ್ರಾರ್ಥಿಸುತ್ತ ಕಳೆದ.

'It was from Me' ಎಂಬ ಈ ಬರಹ ಅವನ ಮರಣಾನಂತರ ಪ್ರಕಟವಾಯಿತು. ಈ ಬರಹ ಲಂಡನ್ ವೇದಾಂತ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಾದ 'ವೇದಾಂತ'ದ ಮೇ–ಜೂನ್ ೨೦೦೮ ಸಂಚಿಕೆಯಲ್ಲಿ ಪ್ರಕಟವಾಯಿತು. ಇದನ್ನು ರಷ್ಯನ್ ಭಾಷೆಯಿಂದ ಇಂಗ್ಲಿಷ್‌ಗೆ ಅನುವಾದಿಸಿದವರು ಜಾನ್ ಫಿಲಿಪ್ಸ್. *ಕನ್ನಡಾನುವಾದ: 'ಅನಾಮಿಕಾ'*

ಎಂದಾದರೂ ನೀನು ಯೋಚಿಸಿರುವೆಯಾ? ನಿನಗೆ ಏನಾದರೂ ಆದರೆ ನನಗೂ ಅದೇ ಆದಂತೆ. ಏಕೆಂದರೆ ನಿನಗೆ ಕಷ್ಟವಾದರೆ ಅದು ನನಗೆ ಪ್ರಿಯವಾದವನಿಗೆ ಕಷ್ಟವಾದಂತೆ. ನನ್ನ ದೃಷ್ಟಿಯಲ್ಲಿ ನೀನು ನನಗೆ ಹತ್ತಿರದವನು ಮತ್ತು ನಾನು ನಿನ್ನನ್ನು ಪ್ರೀತಿಸುತ್ತೇನೆ. ಆದ್ದರಿಂದ ನಿನ್ನನ್ನು ನೋಡಿಕೊಳ್ಳುವುದೆಂದರೆ ನನಗದು ಆನಂದವೇ ಸರಿ.

ಪ್ರಲೋಭನೆಗಳು ನಿನ್ನಲ್ಲಿ ಹುಟ್ಟಿದಾಗ, ಆ ವೈರಿ ಒಂದು ರಭಸವಾದ ಪ್ರವಾಹದಂತೆ ಬಂದಾಗ, ತಿಳಿದುಕೊ – ಅದು **ನನ್ನಿಂದಲೇ.** ನಿನ್ನ ಪರವಾಗಿ ಹೋರಾಡುವ ಜವಾಬ್ದಾರಿಯನ್ನು ನೀನು ನನಗೆ ವಹಿಸಿದಾಗಲೇ ನಿನ್ನ ದೌರ್ಬಲ್ಯಕ್ಕೆ ನನ್ನ ಶಕ್ತಿಯ ಅಗತ್ಯ ಮತ್ತು ಭದ್ರತೆ ನಿನಗೆ ಸಿಗುವುದು.

ಕಷ್ಟಕರ ಸಂದರ್ಭಗಳಲ್ಲಿ ನೀನು ಸಿಲುಕಿದಾಗ, ನಿನ್ನನ್ನು ಯಾರೂ ಅರ್ಥಮಾಡಿಕೊಳ್ಳದವರ ನಡುವೆ ಇದ್ದಾಗ, ಹಾಗೂ ನಿನ್ನ ಅಗತ್ಯವನ್ನು ಯಾರೂ ಪರಿಗಣಿಸದೆ ಹೋದಾಗ, ನಿನ್ನನ್ನು ಪಕ್ಕಕ್ಕೆ ತಳ್ಳುವಾಗ – ತಿಳಿದುಕೊ, ಇದೂ **ನನ್ನಿಂದಲೇ.** ನಾನು ನಿನ್ನ ಭಗವಂತ, ನಿನ್ನ ಸಂದರ್ಭಗಳನ್ನು ವ್ಯವಸ್ಥೆ ಮಾಡು ವವನು. ಈಗಿರುವ ನಿನ್ನ ಪರಿಸ್ಥಿತಿ ಆಕಸ್ಮಿಕವಾಗಿ ಅಲ್ಲ. ನಾನೇ ಈ ಪರಿಸ್ಥಿತಿಯನ್ನು ನಿನಗೆ ನಿಯೋಜಿಸಿರುವೆ. ನಮ್ರತೆಯನ್ನು ಕಲಿಸು ಎಂದು ನನ್ನನ್ನು ನೀನು ಕೇಳಲಿಲ್ಲವೇ? ಆದ್ದರಿಂದ ನಿನ್ನನ್ನು ಆ ಜಾಗದಲ್ಲಿ, ಈ ಪಾಠವನ್ನು ಕಲಿಯಬಹುದಾದ ಶಾಲೆಯಲ್ಲಿ ಇಟ್ಟಿರುವೆ. ನಿನ್ನ ಈಗಿನ ಸಂದರ್ಭಗಳು ಮತ್ತು ನಿನ್ನೊಂದಿಗೆ ಇರುವವರು – ಎಲ್ಲವೂ ನನ್ನ ಇಚ್ಛೆಯನ್ನೇ ಈಡೇರಿಸುವುವು.

ನೀನು ಆರ್ಥಿಕ ತೊಂದರೆಗಳಲ್ಲಿ ಸಿಲುಕಿದ್ದರೆ ನಿನಗೆ ದೈನಂದಿನ ಖರ್ಚುಗಳಿಗೂ ಹಣ ಇಲ್ಲದಿದ್ದರೆ, ಅದೂ **ನನ್ನಿಂದಲೇ.** ಏಕೆಂದರೆ, ನಿನ್ನ ಜೀವನಕ್ಕೆ ಬೇಕಾಗುವುದನ್ನೆಲ್ಲ ವ್ಯವಸ್ಥೆ ಮಾಡುವವನು ನಾನೇ. ನೀನು **ನನ್ನೊಡನೆ** ಓಡಿ ಬರಬೇಕು, ನನ್ನನ್ನೇ ಅವಲಂಬಿಸಬೇಕು. ನನ್ನ ಸಂಪನ್ಮೂಲಗಳು ಅಕ್ಷಯ. ನಿನ್ನ ಮೇಲೆ ನನಗಿರುವ ಶ್ರದ್ಧೆ ಮತ್ತು ನಿನಗೆ ನಾನಿತ್ತ ಭರವಸೆಗಳನ್ನು ನೀನು ನಂಬಬೇಕೆಂಬುದು ನನ್ನ ಆಸೆ. ಯಾರೂ ನಿನ್ನ ಬೇಡಿಕೆಗಳನ್ನು ಕಂಡು, 'ನಿನಗೆ ನಿನ್ನ ಭಗವಂತನ ಮೇಲೆ ನಂಬಿಕೆಯಿಲ್ಲ' ಎನ್ನಬಾರದು.

ದುಃಖಮಯವಾದ ರಾತ್ರಿಯನ್ನು ಕಳೆಯುತ್ತಿರುವೆಯಾ? ನಿನ್ನ ನಿಕಟ ಸಂಬಂಧಿಗಳಿಂದ, ಸ್ನೇಹಿತರಿಂದ, ನಿನ್ನ ಆಪ್ತರಿಂದ ಅಗಲಿರುವೆಯಾ? ನಿನ್ನ ದುಃಖವನ್ನು ನಾನು ತಿಳಿದಿರುವೆನು, ನಿನ್ನ ನೋವನ್ನು ಅನುಭವಿಸಿರುವೆನು. ನಾನೇ ಇದಕ್ಕೆ ಅನುಮತಿ ನೀಡಿರುವೆನು – ನೀನು ನನ್ನಡೆಗೆ ಬರಲಿ ಎಂದು; ಮತ್ತು ನನ್ನಲ್ಲೇ ಶಾಶ್ವತವಾದ ಸಮಾಧಾನ ಪಡೆಯಲಿ ಎಂದು.

ನಿನ್ನ ಸ್ನೇಹಿತನಿಂದ – ಯಾರ ಹತ್ತಿರ ನಿನ್ನ ಭಾವನೆಗಳನ್ನು ಹಂಚಿಕೊಂಡಿರುವೆಯೋ ಅವನಿಂದ ನಿರಾಶೆಗೊಂಡಿರುವೆಯಾ? **ನಾನೇ** ಈ ನಿರಾಶೆಗಳಿಗೆ ಅವಕಾಶ ಕೊಟ್ಟಿದ್ದೆ. ಏಕೆಂದರೆ, ನಿನಗೆ ಅತ್ಯಂತ ಆಪ್ತನಾದ ಸ್ನೇಹಿತ ಭಗವಂತನೊಬ್ಬನೇ ಎಂದು ನೀನು ಅರಿಯಬೇಕು. ನನ್ನೊಂದಿಗೆ ನೀನು ಮಾತನಾಡಬೇಕು, ನನ್ನೊಂದಿಗೆ ನಿನ್ನ ಸುಖ, ದುಖಃಗಳನ್ನು ಹಂಚಿಕೊಳ್ಳಬೇಕು, ಇದೇ ನನ್ನ ಬಯಕೆ.

ಯಾರಾದರೂ ನಿನ್ನನ್ನು ನಿಂದಿಸಿದರೇ? ಅದರ ಬಗ್ಗೆ ನನಗೆ ಹೇಳು. ನನ್ನನ್ನು ಗಟ್ಟಿಯಾಗಿ ಹಿಡಿದುಕೊ. ಅಂಥ 'ನಿಂದಿಸುವ ನಾಲಗೆ'ಗಳಿಂದ ದೂರವಾಗಿ ನಿನ್ನ ಏಕೈಕ ಆಶ್ರಯ ಮತ್ತು ಆತ್ಮವಾದ ನನ್ನೆಡೆಗೆ ಬಾ. ನಿನ್ನ ಸತ್ಯವನ್ನು, ನಿನ್ನ ವಿಧಿಯನ್ನು, ನಡುಹಗಲಿನ ಬಿಸಿಲಿನಂತೆ ಬೆಳಕಿಗೆ ತರುವೆನು.

ನಿನ್ನ ಯೋಜನೆಗಳು ಅಸ್ತವ್ಯಸ್ತಗೊಂಡಿವೆಯೇ? ನಿನ್ನ ಆತ್ಮ ಬಳಲಿ ಬೆಂಡಾಗಿದೆಯೆ? ಇದೂ **ನನ್ನಿಂದಲೇ.** ನೀನು ನಿನ್ನ ಯೋಜನೆಗಳನ್ನು ಏರ್ಪಡಿಸಿ ನನ್ನ ಅನುಗ್ರಹಕ್ಕೆಂದು ನನ್ನ ಬಳಿ ತಂದೆ, ಆದರೆ ನಿನ್ನ ಜೀವನದ ಸನ್ನಿವೇಶಗಳನ್ನು ಕ್ರಮಗೊಳಿಸುವ ಅವಕಾಶವನ್ನು ನನಗೆ ವಹಿಸಬೇಕೆಂಬುದೇ ನನ್ನಾಸೆ. ಆಗ ಅದೆಲ್ಲದರ ಹೊಣೆ ನನ್ನದಾಗುತ್ತದೆ. ಏಕೆಂದರೆ ನಿನಗೆ ಅದನ್ನು ಹೊರಲು ಭಾರವಾಗುವುದು, ನಿನಗೆ ಮಾತ್ರ ಅವುಗಳನ್ನು ನಿಭಾಯಿಸಲು ಸಾಧ್ಯವಿಲ್ಲ. ಏಕೆಂದರೆ ನೀನು ನಿಮಿತ್ತ ಮಾತ್ರವಷ್ಟೆ, ನಿರ್ವಾಹಕನಲ್ಲ.